## ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## ಸಿ. ಸಿ. ನಂ: 431/2018

ಪಿ.ಡಬ್ಲ್ಯೂ- 3
ಸಿ.ಡಬ್ಲೂ- 8

ಹೆಸರು ಃ- ಯಲ್ಲಪ್ಪ ಗಿರಿಯಪ್ಪನವರ

ತಂದೆ / ಗಂಡನ ಹೆಸರು ಃ- ದ್ಯಾಮಪ್ಪ

ವಯಾ ಃ- 53 ವರ್ಷ

ಉದ್ಯೋಗ ಃ- ಮುಖ್ಯ ಪೇದೆ

ವಾಸಸ್ಥಳ ಃ- ಗುಡಿಗೇರಿ

ಸತ್ಯ ಪ್ರತಿಜ್ಞೆ ಮೇರೆಗೆ - ದಿನಾಂಕಃ 19-01-2026.

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

ನಾನು 2017 ರಿಂದ 2022 ರವರೆಗೆ ಮುಖ್ಯ ಪೇದೆಯಾಗಿ ನವಲಗುಂದ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

1) ದಿನಾಂಕ 15-03-2018 ರಂದು ಸುಮಾರು ಮದ್ಯಾಹ್ನ 12-30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಬಂದು ಪ್ರಥಮ ಮಾಹಿತಿಯನ್ನು ನೀಡಿದ್ದು, ಅದನ್ನು ನಾನು ನಮ್ಮ ಠಾಣಾ ಗುನ್ಹಾ ಸಂಖ್ಯೆ 29/2018 ರಂತೆ ದಾಖಲು ಮಾಡಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರ.ವ.ವ. ನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಚಾಸಾ-1 ರವರು ನೀಡಿದ ಪ್ರಥಮ ಮಾಹಿತಿಯು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು.

2) ಪ್ರಕರಣದಲ್ಲಿ ಚಾಸಾ-1 ರವರು ದಸ್ತಗಿರಿ ಮಾಡಲಾದ ಆರೋಪಿತನು ಇಂದು ನ್ಯಾಯಾಲಯದ ಎದುರು ಇದ್ದು ಆತನ ದಸ್ತಗಿರಿ ನಿಯಮ ಪಾಲಿಸಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆತನ ನ್ಯಾಯಾಂಗ ಬಂದನ ಕೋರಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

3) ಅದೇ ದಿನ ಸಾಕ್ಷಿದಾರರಾದ ಚಾಸಾ-4 ಮತ್ತು ಚಾಸಾ-5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿಯವರ ಹೇಳಿಕೆಯನ್ನು ಕ್ರಮವಾಗಿ ನಿ**.**ಪಿ**.4** ಮತ್ತು ನಿ**.**ಪಿ**.5** ಎಂದು ಗುರುತಿಸಲಾಯಿತು.

4) ಅನಂತರ ಮುದ್ದೆ ಮಾಲುಗಳ ಬಗ್ಗೆ ಸ್ವತ್ತು ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಸ್ವತ್ತು ಪಟ್ಟಿಯನ್ನು ನಿ**.**ಪಿ**.6** ಎಂದು ಗುರುತಿಸಲಾಯಿತು. ನಂತರ ದಿನಾಂಕ 02-04-2018 ರಂದು ಮುದ್ದೆ ಮಾಲುಗಳ ರಾಸಾಯನಿಕ ಪರೀಕ್ಷೆ ಕುರಿತು ಚಾಸಾ-6 ರವರಿಂದ ಚಾಸಾ-7 ರವರಿಗೆ ಮುದ್ದೆ ಮಾಲುಗಳನ್ನು ರವಾನಿಸಿ ಹಿಂಬರಹ ಪಡೆದುಕೊಂಡಿರುತ್ತೇನೆ. ಸದರಿ ಹಿಂಬರಹವನ್ನು ಈಗ ನೋಡುತ್ತಿದ್ದು ಅದನ್ನು ನಿ**.**ಪಿ**.7** ಎಂದು ಗುರುತಿಸಲಾಯಿತು.

5) ನಂತರ ಸದರಿ ಪ್ರಕರಣದ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ಹಸ್ತಾಂತರ ಮಾಡಿರುತ್ತೇನೆ. ಆರೋಪಿತನನ್ನು ಹಾಗೂ ಮುದ್ದೆ ಮಾಲುಗಳನ್ನು ಸಾಕ್ಷಿ ನೋಡಿ ಗುರುತು ಮಾಡಿರುತ್ತಾರೆ.

<u>ಪಾಟೀಸವಾಲು ಃ ಶ್ರೀ ಹೆಚ್ ಡಿ ಜಿ ವಕೀಲರಿಂದ ಃ -</u>

1) ನಾನು ಠಾಣಾ ಪ್ರಭಾರ ಹೊಂದಿದ ಕಾರಣ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಚಾಸಾ-1 ರವರು ನನ್ನ ಮೇಲಾಧಿಕಾರಿಯಾದ ಕಾರಣ ಠಾಣೆಯಲ್ಲಿಯೆ ಕುಳಿತು ವಾರಸುದಾರರ ಇಲ್ಲದ ಮದ್ಯದ ಪ್ಯಾಕೇಟಗಳನ್ನು ಬಳಸಿ, ಠಾಣೆಯ ಅಂಕೆ ಸಂಖ್ಯೆಗೋಸ್ಕರ ಆರೋತಪಿನ ವಿರುದ್ಧ ಠಾಣೆಯಲ್ಲಿಯೆ ಕುಳಿತು ಪಂಚನಾಮೆಯನ್ನು ಬರೆದು ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಅಂದರೆ ಸರಿಯಲ್ಲ. ಆರೋಪಿತನಿಗೆ, ಮುದ್ದೆ ಮಾಲಿಗೂ ಮತ್ತು ಘಟನೆಗೂ ಯಾವುದೇ ಸಂಬಂದ ಇಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**

PW-3
CW-8